UASB LIBRARY
Newspaper Clippings
Pg .1 Friday 13-08-2021 Jai Kisan



ಇಲಾಖೆಯಿಂದ ಮಾಹಿತಿ ಮತ್ತು ನೇರ ಸಂವಾದ | ಇಲಾಖೆಯ ನಡಿಗೆ ಹಳ್ಳಿಯ ಕಡೆಗೆ | ಕೃಷಿ ಹಂಗಾಮು ವೇಳೆ ಈ ಅಭಿಯಾನ

ಕೃಷಿ ಅಭಿಯಾನ: ಎಲ್ಲ ಗ್ರಾ. ಪಂ. ನಲ್ಲೂ ಕಾರ್ಯಕ್ರಮ

ನ ರಮೇಶ್‌ಹೆಗಡೆ ಗುಂಡೂಮನೆ ಸಾಗರ

ತಾಲೂಕಿನಲ್ಲಿ ಕೃಷಿ ಇಲಾಖೆ ರೈತರಿಗೆ ಕೃಷಿ ಬೆಳೆಗಳ ಮತ್ತು ಇಲಾಖೆಯ ಸೌಲಭ್ಯಗಳ ನೇರ ಮಾಹಿತಿ ನೀಡುವ ಕೃಷಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಂಡಿದೆ. ಇಲಾಖೆಯ ನಡಿಗೆ ಹಳ್ಳಿಯ ರೈತರ ಕಡೆಗೆ ಎನ್ನುವ ಘೋಷಣೆಯೊಂದಿಗೆ ಕಳೆದ ಕೆಲ ವರ್ಷಗಳಿಂದ ಕೃಷಿ ಹಂಗಾಮು ವೇಳೆ ನಡೆಸಲಾಗುತ್ತಿರುವ ಈ ಅಭಿಯಾನ ಈ ಬಾರಿ ಕರೋನಾ ಕಾರಣಕ್ಕೆ ವಿಳಂಬವಾಗಿದೆ. ಆದರೂ ಆ 13 ರಿಂದ ಆ 22 ರವರೆಗೆ ತಾಲೂಕಿನ 35 ಗ್ರಾಮ ಪಂಚಾಯಿತಿ ವ್ಯಾಪ್ತಿಗೂ ಸಂಚರಿಸಿ ತನ್ಮೂಲಕ ಅಲ್ಲಿಯೇ ರೈತರಿಗೆ ಮಾಹಿತಿ ನೀಡುವ ವಿಶಿಷ್ಟ ಕಾರ್ಯಕ್ರಮ ಇದಾಗಿದೆ. ಇಲ್ಲಿನ ಕೃಷಿ ಸಹಾಯಕ ನಿರ್ದೇಶಕರ ಕಚೇರಿ ಆವರಣದಲ್ಲಿ ಶುಕ್ರವಾರ ಬೆಳಿಗ್ಗೆ 11.30 ಕ್ಕೆ ಶಾಸಕ ಹರತಾಳು ಹಾಲಪ್ಪನವರು ಕೃಷಿ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ರಾಜ್ಯ ಸರಕಾರದ ಸೂಚನೆಯ ಮೇರೆಗೆ ರೈತರಿಗೆ ಸಕಾಲದಲ್ಲಿ ಬೀಜ ಮತ್ತು ಗೊಬ್ಬರ ಒದಗಿಸುವ ಜತೆಗೆ ಆಯಾ ಕಾಲದ ಇಲಾಖೆಯ ಮಾಹಿತಿಯನ್ನು ಅವರಿರುವಲ್ಲಿಯೇ ಹೋಗಿ ತಿಳಿಸುವ ಮೂಲಕ ಹೆಚ್ಚು ಇಳುವರಿ ಪಡೆದು ಕೃಷಿ ಲಾಭದಾಯಕವಾಗಿಸುವ ಉದ್ದೇಶ ಈಡೇರಿಸುವ ಅಭಿಯಾನವಾಗಿದೆ. ಆರಂಭದ ದಿನಗಳಲ್ಲಿ ಶುರುವಾಗಿದ್ದ ಅಭಿಯಾನ ಇದೀಗ ವರ್ಷವೂ ಇಲಾಖೆಯ ಮಾಹಿತಿ ನೀಡುವುದಕ್ಕೆ ಪೂರಕವಾಗಿ ರೂಪುಗೊಂಡಿದೆ.

ಕೇವಲ ಕೃಷಿ ಇಲಾಖೆಗೆ ಮಾತ್ರ ಸೀಮಿತವಾಗಿರದೆ ಈ ಅಭಿಯಾನದಲ್ಲಿ ಹಿಂದೆ ಕೃಷಿ ಹಾಗೂ ಕೃಷಿ ಸಂಬಂಧಿತ ಎಲ್ಲ ಇಲಾಖೆಗಳ ಸಹಭಾಗಿತ್ವ ಒಳಗೊಂಡಿರುತ್ತಿತ್ತು. ಪ್ರಮುಖವಾಗಿ ರೇಷ್ಮೆ, ತೋಟಗಾರಿಕೆ, ಪಶುಪಾಲನೆ, ಮೀನುಗಾರಿಕೆ, ಜಲಾನಯನ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡು ಸಮಗ್ರ ಮಾಹಿತಿ ನೀಡುವ ಕಲ್ಪನೆ ಹೊಂದಿತ್ತು. ಅಲ್ಲದೆ ಹೋಬಳಿಯ ಕೇಂದ್ರದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ರೈತರಿಗೆ ತಾಂತ್ರಿಕ ಮಾಹಿತಿ ನೀಡುವ ಜತೆಗೆ ಆಧುನಿಕ ಕೃಷಿ ಪದ್ಧತಿಯಲ್ಲಿ ಅನುಸರಿಸಬೇಕಿರುವ ವಿಧಾನದ ಕುರಿತು ಮುಕ್ತ ಮಾತುಕತೆ ನಡೆಸುತ್ತಿದ್ದರು. ಆದರೆ ಈ ಬಾರಿ ಕೃಷಿ ಇಲಾಖೆ ತನ್ನ ಮಾಹಿತಿಯೊಂದಿಗೆ ಮಾತ್ರ ಅಭಿಯಾನ ಮಾಡುತ್ತಿರುವುದು ಕಂಡು ಬರುತ್ತಿದೆ.

ಇದರಿಂದ ರೈತರಿಗೆ ಮುಂಗಾರಿಗೆ ಸಂಬಂಧಿಸಿದ ಮಾಹಿತಿಯ ಲಭ್ಯತೆ ಯಾವುದೇ ಪ್ರಯೋಜನಕ್ಕೆ ಬಾರದು. ಆದರೂ ವಿಸ್ತಾರವಾಗಿರುವ ತಾಲೂಕಿನಲ್ಲಿ ಪ್ರಾದೇಶಿಕವಾಗಿಯೂ ಮಳೆ ಮತ್ತು ಬೆಳೆಯಲ್ಲಿ ವ್ಯತ್ಯಾಸವಿದೆ. ಅತೀ ಹೆಚ್ಚು ಮಳೆ ಬೀಳುವ ಕರೂರು ಭಾರಂಗಿ ಹೋಬಳಿ ಹಾಗೂ ತುಸು ಕಡಿಮೆ ಮಳೆಯಾಗುವ ಆನಂದಪುರ, ಕೆಳದಿ ಹೋಬಳಿಗೆ ಪೂರಕವಾದ ಮಾಹಿತಿ ನೀಡಬೇಕಿರುವುದರಿಂದ ಹೋಬಳಿವಾರು ಕೇಂದ್ರೀಕರಿಸಿಕೊಂಡು ಕೃಷಿ ಅಭಿಯಾನ ನಡೆಯಲಿದೆ ಮತ್ತು ಎಲ್ಲ ಗ್ರಾಮಗಳನ್ನು ತಲುಪುವುದರಿಂದ ಈಗಲಾದರೂ ಇಲಾಖೆಯ ಕುರಿತ ಸೂಕ್ತ ಮಾಹಿತಿ ಲಭ್ಯವಾಗಲಿದೆ ಎನ್ನುವ ಚಿಂತನೆ ಇದೆ. ಇದಕ್ಕಾಗಿ ತಾಲೂಕು ಕೇಂದ್ರದಲ್ಲಿರುವ ಸಹಾಯಕ ಕೃಷಿ ನಿರ್ದೇಶಕ ಕಾಶಿನಾಥ್ ಮತ್ತವರ ತಂಡ ಅಭಿಯಾನದ ಅನುಷ್ಠಾನ ಸಿದ್ಧತೆ ನಡೆಸಿದ್ದಾರೆ. ರೈತರಿಗೆ ಆಗುವ ಪ್ರಯೋಜನದ ಕುರಿತು ಕಾದು ನೋಡಬೇಕು.


ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರು (ಸಂಗ್ರಹ ಚಿತ್ರ).

ವಿಳಂಬವಾಗಿಲ್ಲವೆ...?

ಸಾಮಾನ್ಯವಾಗಿ ರೈತರು ಮುಂಗಾರು ಹಂಗಾಮಿನಲ್ಲಿ ತಮ್ಮ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾರೆ ಹೊರತು ಇಲಾಖೆಗೆ ಬಂದು ಮಾಹಿತಿ ಪಡೆಯುವುದು ವಿರಳ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಕೆಲ ವರ್ಷಗಳ ಹಿಂದೆ ಇಂತಹ ಯೋಜನೆಯೊಂದನ್ನು ರೂಪಿಸಿ ಮಳೆಗಾಲದ ಆರಂಭಕ್ಕೆ ಇಲಾಖೆಯೇ ರೈತರ ಬಳಿ ಹೋಗುವಂತಹ ಕಾರ್ಯಕ್ರಮ ಹಾಕಲಾಗಿತ್ತು. ಬಹುತೇಕ ಎಲ್ಲ ಗ್ರಾಮಗಳಿಗೂ ತೆರಳಿ ಅಲ್ಲಿಯೇ ರೈತರನ್ನು ಸೇರಿಸಿ ಎಲ್ಲ ಇಲಾಖೆಯೂ ತಮ್ಮ ಕಾರ್ಯವ್ಯಾಪ್ತಿ ರೈತರಿಗೆ ಇಲಾಖೆಯಿಂದ ದೊರೆಯುವ ಸವಲತ್ತು ಹಾಗೂ ತಜ್ಞರಿಂದ ಆಗತ್ಯ ಕೃಷಿ ಮಾಹಿತಿ ನೀಡುವ ಜೊತೆಗೆ ರೈತರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗುತ್ತಿತ್ತು. ಇದರಿಂದ ಪ್ರಗತಿಪರ ಕೃಷಿಕರ ವಿಚಾರಧಾರೆಗಳು ಕೂಡ ಸಾಮೂಹಿಕಗೊಂಡು ಉಳಿದ ರೈತರು ಕೃಷಿಯಲ್ಲಿ ವಿಶೇಷ ಸಾಧನೆ ಮಾಡಲು ಸಾಧ್ಯ. ಆದರೆ ಈ ಬಾರಿ ಇದು ವಿಳಂಬವಾಗಿದೆ.

13-08-2021
Vsv Pg 12

ಕುಂಬಳಕಾಯಿಯಲ್ಲ, ಇದು ಭಾರಿ ನಿಂಬೆಹಣ್ಣು!

ಮೈಸೂರು: ನಿಂಬೆ ಹಣ್ಣು ಗೊತ್ತಲ್ಲ, ಚಿತ್ರಾನ್ನ, ಜ್ಯೂಸ್ ತಯಾರಿಸಲು, ದೇಹವನ್ನು ತಂಪು ಮಾಡಲೆಂದು ಬಳಸುವ ನಿಂಬೆ ಹಣ್ಣು ಸಾಮಾನ್ಯವಾಗಿ ನಮ್ಮ ಅಂಗೈ ಅಗಲಕ್ಕಿಂತಲೂ ಕಡಿಮೆಯಿರುತ್ತದೆ. ಅದರ ತೂಕ ಹೆಚ್ಚೆಂದರೆ ನೂರು ಗ್ರಾಂ ತೂಗಬಹುದು ಅಷ್ಟೇ. ಆದರೆ ಮೈಸೂರು ಜಿಲ್ಲೆಯ ಸರಗೂರು ತಾಲೂಕಿನ ಬಿದರಹಳ್ಳಿ ಸರ್ಕಲ್ ಬಳಿಯ ಬೇಕರಿ ಮಾಲೀಕರ ಮನೆ ಆವರಣದಲ್ಲಿರುವ ಗಿಡದಲ್ಲಿ ಬರೋಬ್ಬರಿ 2 ಕೆಜಿ 156 ಗ್ರಾಂ ತೂಕದ ನಿಂಬೆ ಹಣ್ಣು ಬೆಳೆದಿದ್ದು, ಜನರಲ್ಲಿ ಅಚ್ಚರಿಯನ್ನುಂಟು ಮಾಡಿದೆ.



ಸನೋಜ್ ಅವರ ಮನೆಯ ಹಿತ್ತಲಿನಲ್ಲಿ ಬೃಹತ್ ನಿಂಬೆಹಣ್ಣು ಬೆಳೆದಿದೆ. ಅಪ ರೂಪದ ನಿಂಬೆ ಗಿಡದಲ್ಲಿ 3 ಬೃಹತ್ ಗಾತ್ರದ ನಿಂಬೆ ಹಣ್ಣುಗಳು ಬೆಳೆದಿದ್ದು, ಅದರಲ್ಲಿ ಒಂದರ ತೂಕ ಮಾತ್ರ ಬರೋಬ್ಬರಿ 2 ಕೆಜಿ 156 ಗ್ರಾಂ ಇರುವುದನ್ನು ಕಂಡು ಜನ ಅಚ್ಚರಿಗೊಂಡಿದ್ದಾರೆ. ಈ ನಿಂಬೆ ಹಣ್ಣಿನ ಗಿಡದಲ್ಲಿ ಇನ್ನೂ 2 ನಿಂಬೆ ಕಾಯಿಗಳಿದ್ದು, ಅವುಗಳನ್ನು ಬೃಹತ್ ಗಾತ್ರ ಬರುವವರೆಗೂ ಸನೋಜ್ ಕಾವಲಿದ್ದು ನೋಡಿಕೊಳ್ಳುತ್ತಿದ್ದಾರೆ. ಈ ತಳಿಗಳನ್ನು ಅಭಿವೃದ್ಧಿಪಡಿಸಿದರೆ ಇದೊಂದು ಅಚ್ಚರಿ ಆಗಲಿದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

13-08-2021
Hd Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in